ಆ) ತಾರತಮ್ಯವಿಲ್ಲ (೬ ದಿನಗಳ ವಾರದಲ್ಲಿನ ದುಡಿಮೆ ಗಂಟೆಗಳಷ್ಟೇ ದುಡಿಮೆ ಗಂಟೆಗಳು ೫ ದಿನಗಳ ವಾರದಲ್ಲಿದೆ).—

ಇ) ಬಂದಿವೆ.

ಈ) ಶಾಸಕರೆಲ್ಲರ ಅಭಿಪ್ರಾಯ ಇದೇ ಆದರೆ ಪುನರ್ ಪರಿಶೀಲನೆ ಮಾಡಲಾಗುವುದು.

ಕಾಪು ಕ್ಷೇತ್ರದ ಪಾಂಗಾಳಮಟ್ಟು ಸೇತುವೆ ರಚಿಸುವ ಬಗ್ಗೆ.

೪೬೫. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ ?

ಅ) ಕಾಪು ಕ್ಷೇತ್ರದ ಪಾಂಗಾಳಮಟ್ಟು ಹಲವಾರು ವರ್ಷಗಳಿಂದ ಸೇತುವೆ ರಚಿಸುವ ಕಾರ್ಯ ಸ್ಥಗಿತಗೊಂಡಿರುವುದು ಸರಕಾರ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ ಸೇತುವೆಯ ಕಾರ್ಯವನ್ನು ಎಂದಂ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಸಧ್ಯದಲ್ಲಿ ಈ ಸ್ಥಳದಲ್ಲಿ ಸೇತುವೆಯನ್ನು ರಚಿಸುವ ಆಲೋಚನೆ ಸರ್ಕಾರದಲ್ಲಿ ಇಲ್ಲ.

ಆ) ಮುಂದೆ ಹಣದ ಲಭ್ಯತೆ ಮತ್ತು ಕೆಲಸದ ಆದ್ಯತೆಗನುಗುಣವಾಗಿ ಈ ಕೆಲಸವನ್ನು ತೆಗೆದು ಕೊಳ್ಳುವುದನ್ನು ಪರಿಶೀಲಿಸಲಾಗುವುದು,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾರಾಟವಾದ ಅಡಿಕೆ, ಗೇರುಬೀಜ ಮತ್ತು ತೆಂಗಿನ ಕಾಯಿ ಕುರಿತು.

೪೬೬. ಶ್ರೀ ಜೆ.ಎಸ್. ಆಚಾರ್ (ಬೈಂದೂರು).—ಮಾನ್ಯ ವಾಣಿಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ ?

ಅ) ಮಾರಾಟ ತೆರಿಗೆ ಇಲಾಖೆಯ ದಾಖಲಾತಿ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೪-೮೫ನೆ ವರ್ಷದಲ್ಲಿ ಹಾಗೂ ೧೯೫-೮೬ನೇ ವರ್ಷದ ಪ್ರಥಮ ೯ ತಿಂಗಳುಗಳಲ್ಲಿ ಎಷ್ಟು ತೂಕದ ೧) ಅಡಿಕೆ ೨) ಗೇರುಬೀಜ ೩) ತೆಂಗಿನಕಾಯಿ ಮಾರಾಟವಾಯಿತು,

ಆ) ಅವುಗಳ ಮೌಲ್ಯ ಹಾಗೂ ಅವುಗಳಿಂದ ಬಂದ ಮಾರಾಟದ ಮೊಬಲಗೆಷ್ಟು

ಇ) ಈ ವಸೂಲಿಗೆ ಬಾಕಿ ಇದ್ದ ಪಕ್ಷದಲ್ಲಿ ಅದರ ಮೊಬಲಗೆಷ್ಟು. ಮೂರು ಸೊತ್ತುಗಳಿಗೆ ಪ್ರತ್ಯೇಕ ವಿವರ ನೀಡಬೇಕಾಗಿ ಕೋರಿಕೆ ?

ಶ್ರೀ ರಾಮಕೃಷ್ಣ ಹೆಗಡೆ (ವಾಣಿಜ್ಯ ಮಂತ್ರಿಗಳು),—

ಅ) ವ್ಯಾಪಾರಿಯು ಸರಕುಗಳ ತೂಕದ ಪ್ರಮಾಣವನ್ನು ಯಾವ ನಮೂನೆಯಲ್ಲಿಯೂ ತಿಳಿಸ ಬೇಕಾಗಿಲ್ಲ. ಆದ್ದುದರಿಂದ ಈ ಮಾಹಿತಿ ಲಭ್ಯವಿಲ್ಲ.

ಅ) ವಿವರಗಳು ಈ ರೀತಿ ಇದೆ.—

		೧೯೮೪-೮೫		೧೯೮೫-೮೬ (ಪ್ರಥಮ ೯ ತಿಂಗಳು)	
		ಮಾಲ್ಯ	ವಸೂಲಾದ ಕರ	ಮಾಲ್ಯ	ವಸೂಲಾದ ಕರ
		(ಕೋಟಿ ರೂ. ಗಳಲ್ಲಿ)		(ಕೋಟಿ ರೂ.ಗಳಲ್ಲಿ)	
೧	ಅಡಿಕೆ	೮೨-೯೭	೩-೬೦	೭೬-೪೫	೩-೮೦
೨	ಗೇರುಬೀಜ	೧೨.೮೨	೦-೬೭	೮-೩೨	೦-೩೨
೩	ತೆಂಗಿನಕಾಯಿ	೧-೯೩	೦-೦೨	೦-೮೧	೦-೦೧

ಆ) ಬಾಕಿ ಇರುವಕರ ವಿವರಗಳು ಹೀಗಿವೆ.

		೧೯೮೪-೮೫	೧೯೮೫-೮೬ (ಪ್ರಥಮ ೯ ತಿಂಗಳು)
೧	ಅಡಿಕೆ	ರೂ. ೧,೧೭,೦೦೦-೦೦	ರೂ. ೪೧,೩೦೦-೦೦
೨	ಗೇರುಬೀಜ	ರೂ. ೨೪,೬೦೦-೦೦	ಇಲ್ಲ
೩	ತೆಂಗಿನಕಾಯಿ	ಇಲ್ಲ	ಇಲ್ಲ

ಸಂಡೂರು ತಾಲ್ಲೂಕಿನಲ್ಲಿನ ಹಳ್ಳಿಗಳನ್ನು ಸಂಡೂರು ವಲಯವೆಂದು ಪರಿಗಣಿಸುವ ಬಗ್ಗೆ

೬೬೯. ಶ್ರೀ ಯು. ಭೂಪತಿ (ಸಂಡೂರು).— ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಸಂಡೂರು ತಾಲ್ಲೂಕಿನಲ್ಲಿ ಎಷ್ಟು ಹಳ್ಳಿಗಳನ್ನು ಸಂಡೂರು ವಲಯವೆಂದು ಗೊತ್ತು ಪಡಿಸಲಾಗಿದೆ ?

ಆ) ಸಂಡೂರು ತಾಲ್ಲೂಕಿನ ಎಲ್ಲಾ ಹಳ್ಳಿಗಳನ್ನು ಸಂಡೂರಿನ ಅರಣ್ಯ ವಲಯ ಇಲಾಖೆಯು ಪರಿಗಣಿಸದೇ ಇರಲು ಕಾರಣಗಳೇನು ?

ಇ) ಸಂಡೂರು ತಾಲ್ಲೂಕನ್ನು ಸಂಡೂರು ವಲಯವೆಂದು ಪರಿಗಣಿಸುವ ಕ್ರಮ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಈ) ಹಾಗಿದ್ದಲ್ಲಿ ಸಂಡೂರು ತಾಲ್ಲೂಕನ್ನು ಸಂಡೂರು ವಲಯವೆಂದು ಘೋಷಿಸಲಾಗುವುದೇ ?